1

# ಆಧ್ಯಾತ್ಮಿಕತೆ (1)

ದೇವರೊಂದಿಗೆ ದೈನಂದಿನ ನಡೆಯುವಿಕೆಯು ಮತ್ತು ಆತ್ಮಿಕತೆಯು ಒಂದೇ ಯಾಗಿರುತ್ತವೆ. ನಿಜವಾದ ಕ್ರೈಸ್ತತ್ವವು ಮತ್ತು ನಿಜವಾದ ಆತ್ಮಿಕತೆಯು ಒಂದೇ ಯಾಗಿರುತ್ತದೆ. ಆತ್ಮಿಕತೆಯು ಇಂದು ರೂಢಿಯಲ್ಲಿ ಹಿಂದಿರುಗಿ ಬಂದಿದೆ. ‘‘ಹೇಗೆ ಮಾಡ ಬೇಕು’’ ಎಂಬ ಪುಸ್ತಕಗಳಿಗಿಂತ ಹೆಚ್ಚಾಗಿ 1996ರಲ್ಲಿ ಆತ್ಮಿಕತೆಯ ಮೇಲೆ ಹೆಚ್ಚು ಪುಸ್ತಕಗಳು ಬರೆಯಲ್ಪಟ್ಟಿವೆ ಎಂದು *ನ್ಯೂಸ್‌ವೀಕ್* ಮ್ಯಾಗಝೀನ್ ಗಮನಿಸಿದೆ. ಕ್ರೈಸ್ತತ್ವವಲ್ಲ, ಆದರೆ ಜನರು ‘‘ಆತ್ಮಿಕತೆ’’ಯಲ್ಲಿರುವುದು ದುಃಖಕರವಾದ ಸಂಗತಿಯಾಗಿದೆ. ಬಹುಶಃ ‘‘ಕಂಟ್ರಿ ಮತ್ತು ವೆಸ್ಟರ್ನ್’’ ಮ್ಯೂಜಿಸಿಯನ್ ಇದನ್ನು ಚೆನ್ನಾಗಿ ಹೇಳಿದ್ದಾನೆ:

> ನಾನು ಒಬ್ಬ ಧಾರ್ಮಿಕ ವ್ಯಕ್ತಿಯಾಗಿರುವದಿಲ್ಲ. ನಾನು ದೇವಾಯಲಕ್ಕೆ ಹೋಗುವದಿಲ್ಲ ಇಲ್ಲವೇ ಯಾವುದೇ ದೈವಜ್ಞಾನ ಶಾಸ್ತ್ರದಲ್ಲಿ ಇಲ್ಲವೇ ಧರ್ಮತತ್ವದಲ್ಲಿ ಇಲ್ಲವೇ ಯಾವುದರಲ್ಲಿಯೂ ನಂಬಿಕೆಯಿಡುವದಿಲ್ಲ, ಆದರೆ ಆತ್ಮಿಕ ವಿಶ್ವವು ಇರುವುದೆಂದು ನಾನು ನಂಬುತ್ತೇನೆ. ಹಿಂದುಯಿಸಮ್, ಕ್ರಿಶ್ಚಿಯಾನಿಟಿ, ಬುದ್ಧಿಸಮ್ ಮತ್ತು ನೇಟಿವ್ ಅಮೇರಿಕನ್ ಆತ್ಮಿಕತೆಯನ್ನು ಕುರಿತು ಓದುತ್ತೇನೆ. ಒಂದು ರೀತಿಯ ಆತ್ಮಿಕತೆಯ ಇಬ್ಬಂದಿಯಾಗಿದ್ದೇನೆ. ನಾನು ಪೂರ್ಣ ನೀಲ - ರಕ್ತದವನಲ್ಲ, ಆದರೆ ನನಗಾಗಿ ಕೆಲಸ ಮಾಡುವದನ್ನು ನಾನು ತೆಗೆದುಕೊಳ್ಳುತ್ತೇನೆ.

ಬೋಧನೆ, ನಿಶ್ಚಿತತೆ ಇಲ್ಲವೇ ನಂಬಿಕೆಯಿಲ್ಲದೆ ಆತ್ಮಿಕತೆಯು ಹೇಗೆ ಅಸ್ತಿತ್ವದಲ್ಲಿರುತ್ತದೆ? ವಿಚಾರವಿಲ್ಲದೆ ನಂಬಿಕೆಯು ಹೇಗೆ ಅಸ್ತಿತ್ವದಲ್ಲಿರುತ್ತದೆ? ನಮ್ಮ ಸಂಗೀತ ಸ್ನೇಹಿತನು ತನ್ನ ಸ್ವಂತ ದೇವರಾದನು, ತನ್ನ ಸ್ವಂತ ಸಭೆಯಾದನು. ‘‘ನಿನ್ನಷ್ಟಕ್ಕೆ - ನೀನೇ ಮಾಡು’’ ಆತ್ಮಿಕತೆ ಇರುವುದು. ಆತ್ಮಿಕತೆಯು ಸ್ವಾರ್ಥದಲ್ಲಿ ಮತ್ತು ಗರ್ವದಲ್ಲಿ ಅಂತಿಮವಾದದ್ದಾಗಿರಬಹುದು. ತಕ್ಷಣದ ಗಂಡಾಂತರವು ಯಾವಾಗಲೂ ‘‘ಸ್ವಯಂ - ಶೋಷಣೆಯಾಗಿರಬಹುದು.’’ ‘‘ಸ್ವಯಂ - ಮೇಲ್ದರ್ಜೆಗೇರುವ’’ ಆತ್ಮಿಕತೆಯು ನಿಜವಾದ ಆತ್ಮಿಕತೆಯಾಗಿರಲಾರದು.

ದೇವರನ್ನು, ಬೈಬಲನ್ನು, ಕ್ರಿಸ್ತನನ್ನು, ಸತ್ಯವನ್ನು, ಸಭೆಯನ್ನು ಇಲ್ಲವೇ ಭಾವನೆಯನ್ನು ಬಿಟ್ಟು ಆತ್ಮಿಕತೆಯು ಹೇಗಿರುವುದು? ಎಲ್ಲಾ ಸಂಗತಿಗಳಲ್ಲಿ ಆತ್ಮಿಕತೆಯು ಸ್ವಯಂ ಸೇವೆ ಮಾಡುವಂಥದ್ದಲ್ಲ. ‘‘ಆತ್ಮಿಕತೆ’’ ಎಂಬ ಪದದಿಂದ ಕೆಲವೊಂದು ರೂಪವನ್ನು ಉಪಯೋಗಿಸುವದರಿಂದ ಬೈಬಲು ಎಷ್ಟು ಅಲ್ಪವಾದದ್ದನ್ನು ಪ್ರಕಟಿಸುತ್ತದೆಂಬುದು ಆಶ್ಚರ್ಯಕರವಾದದ್ದಾಗಿದೆ. ಆಬ್ರಹಾಮ, ಮೋಶೆ, ದಾವೀದ ಮತ್ತು ಪೌಲರ ಬಗ್ಗೆ ದೊಡ್ಡ ಹೇಳಿಕೆಗಳು ಮಾಡಲ್ಪಟ್ಟಿವೆ. ಆದರೆ ಅವು ‘‘ಆತ್ಮಿಕವಾದವುಗಳಂತೆ’’ ವಿಭಾಗಿಸಲ್ಪಟ್ಟಿರುವದಿಲ್ಲ, ಹನ್ನೆರಡು ಜನ ಅಪೊಸ್ತಲರ ಬಗ್ಗೆ ನೀವು ಹೇಗೆ ಮೌಲ್ಯಮಾಪನಮಾಡುವಿರಿ? ಯಾರು ಅತೀ ಹೆಚ್ಚು ಆತ್ಮಿಕತೆಯುಳ್ಳವನಾಗಿದ್ದನು? ಅಗತ್ಯವಾಗಿರುವ ಕೆಲವು ಬೈಬಲ್ ಉಲ್ಲೇಖಗಳು - 1 ಕೊರಿಂಥ 2:9-16; 3:1; ಗಲಾತ್ಯ 6:1; ಎಫೆಸ 1:3; ಕೊಲೊಸ್ಸೆ 1:9; 1 ಪೇತ್ರ 2:5; ಮತ್ತು ರೋಮಾಪುರ 8:6; KJV.

ನಾವಿರುವದಕ್ಕಿಂತ ಹೆಚ್ಚು ಧಾರ್ಮಿಕರಾಗಿರಲು ಬಯಸುವದನ್ನು ನಾವು ಯೋಚಿಸುತ್ತೇವೆ. ಫರಿಸಾಯರು ಕೊಡುವಾಗ ತುತ್ತೂರಿಗಳನ್ನು ಊದಿಸುತ್ತಿದ್ದರು, ಸಭಾಮಂದಿರಗಳಲ್ಲಿ ಉದ್ದವಾದ ಪ್ರಾರ್ಥನೆ ಮಾಡುತ್ತಿದ್ದರು. ಬೀದಿಗಳ ಮೂಲೆಗಳಲ್ಲಿ ಪ್ರಾರ್ಥಿಸುತ್ತಿದ್ದರು, ಉಪವಾಸ ಮಾಡುವಾಗ ಜೋಲುಮುಖ ಹಾಕುತ್ತಿದ್ದರು (ಮತ್ತಾಯ 6:1-18). ಹೊಸ ಸೇವೆಯಲ್ಲಿ ಪ್ರಥಮ ವರ್ಷದಲ್ಲಿ ಪ್ರಸಂಗಿಗಳು ಭಯಗೊಂಡಿದ್ದರು. ಜನರು ತಾವಿರುವದಕ್ಕಿಂತಲೂ ಹೆಚ್ಚಾಗಿ ಕಂಡುಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದರು. ಒಬ್ಬರನ್ನೊಬ್ಬರು ತಿಳಿದುಕೊಂಡನಂತರ, ಒಂದು ವರ್ಷದಲ್ಲಿ ಈ ಆಟ ಮುಗಿದು ಹೋಗುತ್ತದೆ. ಹೀಗಿದ್ದರೂ, ನಾವು ನಮ್ಮನ್ನು ಕೆಲವು ಸಲ ಮೂರ್ಖರನ್ನಾಗಿ ಮಾಡುತ್ತೇವೆ! ಕೆಲವು ಸಲ ಇತರರನ್ನು ಮೂರ್ಖರನ್ನಾಗಿ ಮಾಡುತ್ತೇವೆ! ತಮ್ಮ ಆತ್ಮಿಕತೆಯಿಂದ ಇತರರ ಮೇಲೆ ಪ್ರಭಾವ ಬೀರುವದರ ಬಗ್ಗೆ ಯೇಸುವು ಹೀಗೆ ಹೇಳಿದ್ದಾನೆ, "ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 6:2, 5, 16). ಎಲ್ಲಾ ಸಂಗತಿಗಳಲ್ಲಿ, ನಿಜವಾದ ಆತ್ಮಿಕತೆಯು ನಾವು ಇತರರಿಗಿಂತ - ಹೆಚ್ಚು ಉತ್ತಮರಾಗಿರುವೆವೆಂದು ಯೋಚಿಸುವಂತೆ ಮಾಡುವದಿಲ್ಲ (ಲೂಕ 18:9-14).

ಯಾವುದು ವಾಸ್ತವಿಕವಾದದ್ದಾಗಿದೆ ಎಂಬುದನ್ನು ಕಲಿತುಕೊಳ್ಳಲಿಕ್ಕೆ ಕಪಟವಾದದ್ದನ್ನು ನಾವು ಪರೀಕ್ಷಿಸಬಹುದು. ಯಾವುದು *ಆತ್ಮಿಕತೆಯಾಗಿರುವದಿಲ್ಲ?*

1. ಅದು "ಕಲೆಯುಳ್ಳ - ಗ್ಲಾಸಿನ ನೋಟವಾಗಲೀ, ಪರಿಶುದ್ಧ ಆಳುವಿಕೆಯಾಗಲೀ" ಆಗಿರುವದಿಲ್ಲ. ಅನೇಕರು ವಿಶೇಷ ಬಟ್ಟೆಗಳನ್ನು ಧರಿಸುವರು, "ಧಾರ್ಮಿಕವಾಗಿ ಮಾತಾಡುವರು," ಮತ್ತು ಭಕ್ತಿಯಿಂದ ವರ್ತಿಸುವರು. ಅದು ಕಪಟವಾಗಿದೆಯೆಂದು (ನಟನೆಯಾಗಿದೆಯೆಂದು) ಯೇಸು ಖಂಡಿಸಿದನು. ಎಲ್ಲಾ ಜನರು ಏಕಾಭಿಪ್ರಾಯದಿಂದ ಒಪ್ಪಿಕೊಳ್ಳುವ ಒಂದು ಸಂಗತಿಯಿದೆ: "ಸ್ವನೀತಿಯು ಹೊಲಸುನಾರುತ್ತದೆ" ಆತ್ಮಿಕತೆಯು ತೋರಿಸಲ್ಪಡುವವರೆಗೆ ಸುಂದರವಾದ ಸಂಗತಿಯಾಗಿರುತ್ತದೆ.

2. ಅದು "ವ್ಯಕ್ತೀಕೃತವಾದ (ವೈಯಕ್ತಿಕ) ಧರ್ಮ"ವಾಗಿರುವದಿಲ್ಲ. "ವ್ಯಕ್ತೀಕೃತ - ಆತ್ಮಿಕತೆಯು" ಸೋತು ಹೋಗುತ್ತದೆ! "ಮನುಷ್ಯನು ಒಬ್ಬಂಟಿಗನಾಗಿರುವುದು ಒಳ್ಳೆಯದಾಗಿರುವದಿಲ್ಲ" (ಆದಿಕಾಂಡ 2:18) ಎಂದು ಮನುಷ್ಯನ ಬಗ್ಗೆ ದೇವರು ಹೇಳಿದ ಮೊದಲನೆಯ ಸಂಗತಿಯಾಗಿದೆ. "ಒಬ್ಬ ಮನುಷ್ಯನು ಮನುಷ್ಯನಾಗಿರುವದಿಲ್ಲ." ತನ್ನಷ್ಟಕ್ಕೆ ಮನುಷ್ಯನನ್ನು ಬಿಟ್ಟರೆ ದೆವ್ವವಾಗಬಹುದು.

> ಆತ್ಮಿಕತೆಯು ಹುಚ್ಚುತನದಲ್ಲಿ ಬೆಳೆಯುತ್ತದೆ,
> ಸ್ವಾರ್ಥದಲ್ಲಿ ಅವನತಿಗೊಳ್ಳುತ್ತದೆ,
> ಬಡಾಯಿಕೊರತೆಗೆ ಒಳಗಾಗುತ್ತದೆ,
> ಉಗ್ರವಾಗಬಹುದು.
> ಮನುಷ್ಯನ ಅತೀ ಕೆಟ್ಟ ಪಾಪವು ಆತ್ಮಿಕತೆಯಾಗಬಹುದು.

ಸಾಮಾನ್ಯವಾಗಿ, ಜನರು ಇಂದು ಸಂಘಟಿತ ಧರ್ಮವನ್ನು ಕಡೆಗಣಿಸುತ್ತಾರೆ. ಸಭೆಯು ಆತ್ಮಿಕತೆಯನ್ನು ತಡೆಗಟ್ಟುತ್ತದೆಂದು ಅನೇಕರು ಯೋಚಿಸುತ್ತಾರೆ; ಆತ್ಮಿಕತೆ ಮತ್ತು ಸಭೆ ಇವುಗಳು ಒಂದಕ್ಕೊಂದು ಕೂಡಿ ಅಸ್ತಿತ್ವದಲ್ಲಿರಲಾರವು ಎಂದು ಕೆಲವರು ಯೋಚಿಸುತ್ತಾರೆ. ರಕ್ಷಿಸಲ್ಪಟ್ಟ ಪಾಪಿಗಳು ದೇಹಕ್ಕೆ (ಸಭೆಗೆ) ಕೂಡಿಸಲ್ಪಟ್ಟಿದ್ದಾರೆ. ನಾವು "ಹೊರಗೆ ಕರೆಯಲ್ಪಟ್ಟಿದ್ದೇವೆ" (ಕುಟುಂಬ). ಜನರು ತಮ್ಮನ್ನು ಜನರಿಂದ ಹಾಗೂ ಜೀವನದಿಂದ ಬಿಡುಗಡೆ ಮಾಡಿಕೊಳ್ಳಲು ಪರ್ವತಗಳಿಗೆ ಗುಂಪಾಗಿ ಹೋಗು ವಾಗ,

ಯೇಸುವು ಬಂದು, ಭೂಮಿಯ ಮೇಲೆ ನಮ್ಮೊಂದಿಗೆ ಕೂಡಿಕೊಂಡನು. ನಿಜವಾದ ಆತ್ಮಿಕತೆಯು ಸಂಯುಕ್ತ ಸಂಬಂಧದಲ್ಲಿ ಕಂಡುಬಂದಿದೆ. ಯಾರೊಬ್ಬನೂ ಎಂದಾದರೂ ಒಬ್ಬ ಆತ್ಮಿಕ ದೈತ್ಯ ಮಾತ್ರವೇ ಆಗಿರುವದಿಲ್ಲ. (ಹೆಚ್ಚಿನ ವಿಷಯಗಳು ಆಧ್ಯಾತ್ಮಿಕತೆ 2ರಲ್ಲಿ.)

◇◇◇◇◇◇◇◇◇

# ದೀನತೆ + ಅಧೀನತೆ = ವಿಧೇಯ ಸೇವಕರು (ಭಾಗ 1)

## ಯಾಕೋಬ 4:6-10

*"ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು" (ಯಾಕೋಬ 4:10).*

ದೀನತೆ + ಅಧೀನತೆ = ವಿಧೇಯ ಸೇವಕ. ಯಾಕೋಬನಲ್ಲಿಯ ನಮ್ಮ ಪಠ್ಯವನ್ನು ಪುನಃ ಓದಿರಿ. ದೇವರು ಎಲ್ಲವನ್ನೂ ಬಯಸುವುದು ಮತ್ತು ಎಲ್ಲವನ್ನೂ ಆತನು ಉಪಯೋಗಿಸುವುದು ವಿಧೇಯ ಸೇವಕರನ್ನು. "ಸಭೆಯ ಕೆಲಸದವನು" ಎಂಬುದು ಬೈಬಲಿನ ಮಾತಾಗಿರುವದಿಲ್ಲ. ವಿಧೇಯ ಸೇವಕರು ದೇವರೊಂದಿಗೆ ನಡೆಯುತ್ತಾರೆ; ದೇವರೊಂದಿಗೆ ನಡೆಯುವವರು ವಿಧೇಯ ಸೇವಕರಾಗಿರುವರು. ಅವರು ಒಂದು ಮತ್ತು ಅದೇ ಸಂಗತಿಯಾಗಿರುವರು. ನಮ್ಮ ಪಠ್ಯದಲ್ಲಿ, ಯಾಕೋಬನು ದೀನತೆ ಮತ್ತು ಅಧೀನತೆ ಒಂದೇ ಸಂಗತಿಯನ್ನು ವಿಧೇಯ ಸೇವಕರನ್ನು ಉತ್ಪಾದಿಸುತ್ತದೆಂದು ಭರವಸೆ ಕೊಟ್ಟಿದ್ದಾನೆ. ದೀನತೆ ಮತ್ತು ಅಧೀನತೆ ಕೂಡಿಸಲ್ಪಡುವುದು. ವಿಧೇಯ ಸೇವಕರಿಗೆ ಸಮನಾಗಿರುತ್ತದೆ. ದೇವರು ದೇವರಾಗಿರುತ್ತಾನೆ, ಮತ್ತು ನಾನು ಆಗಿರುವದಿಲ್ಲ. ದೇವರೊಂದಿಗೆ ನಡೆಯುವ ಯಾವನೇ ಆಗಲಿ ಅವನು ದೀನತೆಯುಳ್ಳವನೂ ಅಧೀನನಾಗುವವನೂ ಆಗಿರುವನು.

ದೇವರು ನಮ್ಮ ತತ್ವವು ದೊಡ್ಡದಾಗಿರುವಂತೆ, ನಮ್ಮ ದೀನತೆಯೂ ಹೆಚ್ಚು ದೊಡ್ಡದಾಗಿರುವುದು. ನಮ್ಮ ದೀನತೆಯು ಹೆಚ್ಚು ದೊಡ್ಡದಾಗಿರುವಂತೆ, ನಮ್ಮ ಅಧೀನತೆಯೂ ಹೆಚ್ಚು ದೊಡ್ಡದಾಗಿರುವುದು. ಕ್ರೈಸ್ತತ್ವದಲ್ಲಿ ಅದ್ವಿತೀಯವಾದ, ಅಸ್ತಿವಾರವಾಗಿರುವ ಸದ್ಗುಣವು ದೀನತೆಯಾಗಿದೆ. ನೀನು ದೀನತೆಯನ್ನು ಸಾಧಿಸುವವರೆಗೆ ನೀನು ಬೈಬಲಿನ ಆತ್ಮಿಕತೆಯಲ್ಲಿ ಪ್ರಗತಿ ಹೊಂದಲಾರಿ. ಕ್ರೈಸ್ತ ನಡೆಯುವಿಕೆಯು ದೀನತೆಯಲ್ಲಿ ಪ್ರಾರಂಭವಾಗುತ್ತದೆ ಮತ್ತು ಅಂತ್ಯಗೊಳ್ಳುತ್ತದೆ.

ಆತ್ಮಿಕತೆಯು ನಮ್ಮ ಆಧುನಿಕ ಸಂಸ್ಕೃತಿಯಲ್ಲಿ ಶೈಲಿಯಲ್ಲಿ ಹಿಂದಿರುಗಿ ಬಂದಿರುತ್ತದೆ. ಹೀಗಿದ್ದರೂ, ದೀನತೆಯು "ಒಳಗೆ," ಇರುವದಿಲ್ಲ, ಮತ್ತು ಅಧೀನತೆಯು "ರಾಜಕೀಯವಾಗಿ ಸರಿಯಾಗಿ" ಇರುವದಿಲ್ಲ. ಆದುದರಿಂದ, ಆತ್ಮಿಕತೆಯಂತೆ ಪ್ರಸರಿಸಲ್ಪಟ್ಟದ್ದು

ಹೆಚ್ಚಾಗಿರುವದಿಲ್ಲ. ಅದು ದೀನತೆಯದಲ್ಲದಾಗಿದ್ದರೆ, ಆಗ ಅದು ದೇವರದಾಗಿರುವದಿಲ್ಲ! ಬೈಬಲಿನ ಆತ್ಮಿಕತೆಯು ಗರ್ವವನ್ನು ಪ್ರಸಾರಪಡಿಸುವದಿಲ್ಲ. ಆತ್ಮಕೇಂದ್ರಿತ, ಆತ್ಮಿಕ ವರ್ಚಸ್ಸುಳ್ಳ ನಾಯಕರನ್ನು ನಾವು ಯಾಕೆ ಬಹುಮಾನಿಸಬೇಕು ಮತ್ತು ಹಿಂಬಾಲಿಸಬೇಕು? ಕ್ರೈಸ್ತರು ಯಾವಾಗಲೂ ಅನುಕೂಲವಾಗಿರುವವರಲ್ಲ, ಆದರೆ ಅವರು ಯಾವಾಗಲೂ ದೀನರಾಗಿರತಕ್ಕದ್ದು.

"ನನಗೆ ಹೋಗಲಿಕ್ಕೆ ಬೇರೆಲ್ಲಿಯೂ ಇಲ್ಲ ಎಂಬ ಆಶ್ಚರ್ಯಕರವಾದ ಭರವಸೆಯಿಂದ ಅನೇಕ ಸಲ ನಾನು ನನ್ನ ಮೊಣಕಾಲುಗಳಿಗೆ ಓಡಿಸಲ್ಪಟ್ಟಿದ್ದೇನೆ" ಎಂದು ಅಬ್ರಹಾಮ ಲಿಂಕನ್ ಹೇಳಿದರು.[1] ನಮ್ಮ ಸೇವಕ ಸಮಸ್ಯೆಯು ನಮ್ಮ ದೀನತೆಯ ಸಮಸ್ಯೆಯಾಗಿದೆ. ದೀನತೆಯುಳ್ಳ ಜನರು ಮಾತ್ರವೇ ಸೇವೆ ಮಾಡುವರು. ಸೇವಕರೊಳಗಿಂದ ನಿಮ್ಮ ಎಲ್ಲಾ ಪ್ರಸಂಗಿಗಳನ್ನು, ನಾಯಕರನ್ನು, ಮತ್ತು ಬೋಧಕರನ್ನು ಆಯ್ದುಕೊಳ್ಳಿರಿ. ಈ ಕಾರಣಕ್ಕಾಗಿಯೇ ಹಿರಿಯರು ಮೊದಲು ಡೀಕನರು (ಸೇವಕರು, ಅಧಿಕಾರಿಗಳಲ್ಲ) ಆಗಿರಬೇಕು.

## ದೇವರು ಮತ್ತು ಗರ್ವ ಮಿಶ್ರವಾಗುವದಿಲ್ಲ

"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ" (ಯಾಕೋಬ 4:6ಬಿ) ಎಂದು ಯಾಕೋಬನು ಹೇಳಿದನು. ಅಹಂಕಾರವುಳ್ಳ ಸದಸ್ಯನ ಬಗ್ಗೆ ಇಲ್ಲವೇ ಸಭೆಯ ಬಗ್ಗೆ ದೇವರಿಗೆ ಮಾಡಲು ಏನೂ ಇರುವದಿಲ್ಲ. ನಾವು ಯಾವಾಗ ಇದನ್ನು ಕಲಿತುಕೊಳ್ಳುವೆವು? ಯೇಸುವು ತನ್ನ ಸಾಮ್ಯಗಳಲ್ಲಿ ಗರ್ವಕ್ಕೆ ವಿರುದ್ಧವಾಗಿ ಹೇಳಿದನು. ಪ್ರಕಟನೆಯಲ್ಲಿ, ಅಹಂಕಾರವುಳ್ಳ ಸಭೆಗಳು ಗಂಭೀರವಾಗಿ ಗದರಿಸಲ್ಪಟ್ಟಿವೆ. ದೊಡ್ಡ ಹೆಸರಿನಿಂದ ಇದ್ದ ಸಾರ್ದಿಸದಲ್ಲಿಯ ಸಭೆಯು ಸತ್ತುಹೋಗಿತ್ತು (ಪ್ರಕಟನೆ 3:1). ಲವೊದಿಕೀಯದಲ್ಲಿಯ ಸಭೆಯು, "ನಾನು ಐಶ್ವರ್ಯವಂತನು ... ಒಂದರಲ್ಲಿಯೂ ಕೊರತೆಯಿಲ್ಲದವನು" (ಪ್ರಕಟನೆ 3:17ಎ) ಎಂದು ಹೇಳಿತು. ಅದಕ್ಕಿಂತ ಹೆಚ್ಚು ಪಾಪಭರಿತವಾದ ಮತ್ತು ಹೆಚ್ಚು ಮೂರ್ಖತನದ ಹೇಳಿಕೆಯು ಯಾವುದಿರುವುದು? ಲವೊದಿಕೀಯವು ಸಾಮಾನ್ಯವಾಗಿ ಅದರ ಉಗುರು ಬೆಚ್ಚಗಿನ ಪರಿಸ್ಥಿತಿಗಾಗಿ ಜ್ಞಾಪಿಸಲ್ಪಟ್ಟಿದೆ; ದೇವರು ಅಷ್ಟೇ ಸಮನಾಗಿ ಅವರ ಗರ್ವವನ್ನು ಜ್ಞಾಪಿಸಿಕೊಳ್ಳುತ್ತಾನೆ. ಅಹಂಕಾರವುಳ್ಳ ಸಭೆಯು ಜಗತ್ತನ್ನು ರಕ್ಷಿಸಲಾರದು.

*Humility and How I Attained It* ಎಂಬ ಪುಸ್ತಕವನ್ನು ಬರೆದ ಪ್ರಸಂಗಿಯನ್ನು ಕುರಿತು ನಾವು ನಗುತ್ತೇವೆ. "ಕುಳಿತುಕೊಂಡು ಗರ್ವಿಯಾಗಿ ವರ್ತಿಸುತ್ತಿದ್ದ" ಒಬ್ಬ ಪ್ರಸಂಗಿಯ ಬಗ್ಗೆ ನಮಗೆ ತಿಳಿದಿತ್ತು. ಜನರು ತಮ್ಮ "ದೀನ ಅಭಿಪ್ರಾಯಗಳನ್ನು" ಕೊಡುವರು. "ತನ್ನ ಗರ್ವದ ಅಭಿಪ್ರಾಯವನ್ನು" ವ್ಯಕ್ತಪಡಿಸಿದ ಯಾವನ ಬಗೆಗಾದರೂ ಕೇಳಿರುವಿರೋ? ಒಬ್ಬ ವಿಮಾನ ಸಹಾಯಕನು ಒಬ್ಬ ಕಾಲ್ಪನಿಕ ಓಟಗಾರನಿಗೆ ಅವನ ಸೀಟ್‌ಬೆಲ್ಟ್ ಕಟ್ಟಿಕೊಳ್ಳಲಿಕ್ಕೆ ಹೇಳಿದನು. ಅವನು ಗರ್ವದಿಂದ "ಅತೀಮಾನವನಿಗೆ ಸೀಟ್‌ಬೆಲ್ಟಿನ!" ಅಗತ್ಯತೆಯಿಲ್ಲ ಎಂದು ಉತ್ತರ ಕೊಟ್ಟನು. ಕೂಡಲೇ ಯೋಚಿಸಿ ಸಹಾಯಕನು, "ಅತೀಮಾನವನಿಗೆ ವಿಮಾನದ ಅಗತ್ಯತೆಯಿರುವದಿಲ್ಲ!" ಎಂದು ಉತ್ತರ ಕೊಟ್ಟನು.

ನಾನು ಅನುದಿನವೂ ಗರ್ವದಿಂದ ಆಘಾತಕ್ಕೊಳಗಾಗುತ್ತೇನೆ. ಹೇಳಲ್ಪಟ್ಟ ಇಲ್ಲವೇ ಮಾಡಲ್ಪಟ್ಟ ಯಾವುದಾದರೊಂದು ನನ್ನ ಭಾವನೆಗಳಿಗೆ ನೋವನ್ನು ಕೊಡುತ್ತದೆ ಮತ್ತು ನಾನು ಪ್ರತಿಕ್ರಿಯೆ ತೋರಿಸುತ್ತೇನೆ. ಆಗ ನಾನು ನನ್ನ ಸ್ವಾರ್ಥದ ಚಿತ್ತವನ್ನು, ನನ್ನ ಗರ್ವವನ್ನು, ನನ್ನ ಅಲ್ಪತನವನ್ನು ನೋಡುತ್ತೇನೆ. ಯೇಸುವು ಪಾಪಿಗ

ಳನ್ನು "ಮೂರ್ಖರು" ಎಂದು ಕರೆದಿರುವ ಕಾರಣಗಳಲ್ಲಿ ಇದು ಒಂದಾಗಿರುವುದು. ಪಾಪದ ಅಪರಾಧವು ಅದು ದೇವರಿಗೆ ವಿರುದ್ಧವಾಗಿರುವಂಥದ್ದಾಗಿದೆ. ನಾವು ಮನಸ್ಸಾಕ್ಷಿಯಿಂದ ಚುಚ್ಚಲ್ಪಡುವವರಾಗಿರಬೇಕು. ಗಾಯಗೊಂಡ ಗರ್ವದಿಂದ ಅದನ್ನು ಗಲಿಬಿಲಿಗೊಳಿಸಬಾರದು. ಗರ್ವವು ನುಂಗಲಿಕ್ಕೆ ಕಠಿಣವಾದದ್ದಾಗಿರುತ್ತದೆ. ಜನರು "ಪಾಪಿಗಳು" ಎಂದು ಕರೆಯಲ್ಪಡುವಾಗ ಗಲಿಬಿಲಿಗೊಳ್ಳುವದಿಲ್ಲ; "ಕಳೆದು ಕೊಂಡವರು" ಎಂದು ಗುರುತಿಸಲ್ಪಡುವಾಗ ನಾಶಗೊಳಿಸಲ್ಪಡುತ್ತಾರೆ. ನಮ್ಮ ಹೃದಯವು ಮನಸ್ಸಾಕ್ಷಿಯಿಂದಿರುವುದೋ ಇಲ್ಲವೇ ಗರ್ವದಿಂದ ಇರುವುದೋ?

ಕೆಟ್ಟದ್ದನ್ನು ಇನ್ನೂ ಹೆಚ್ಚು ಕೆಟ್ಟದ್ದನ್ನಾಗಿ ಮಾಡಲಿಕ್ಕೆ "ಸುಳ್ಳು ದೀನತೆಯ" ನಮ್ಮ ಅತಿ ದೊಡ್ಡ ಕಪಟತನವಾಗಿದೆ. ಮನುಷ್ಯನು ಯಾಕೆ ಗರ್ವಿಯಾಗಿರಬೇಕು? ತನ್ನ ದಾಖಲೆಯ ಬಗ್ಗೆ ಅವನು ಗರ್ವಿಯಾಗಿರಬೇಕೆ? ಮನುಷ್ಯನ ದಾಖಲೆಯು ಯುದ್ಧ, ವರ್ಣಭೇಧ, ದ್ವೇಷ, ಧರ್ಮಾಂಧತೆ. ಸುಳ್ಳು ಹೇಳುವುದು, ಮೋಸ ಮಾಡುವುದು, ಲೈಂಗಿಕ ಅನೈತಿಕತೆ, ಹಿಂಸೆ, ಅಪರಾಧ, ಬಡತನ ಮತ್ತು ಕೀಳುತನ ಇವುಗಳಲ್ಲಿ ಒಂದಾಗಿದೆ! ಗರ್ವವು ಎಲ್ಲಾ ಪಾಪಕ್ಕೆ ಮಣ್ಣಾಗಿದೆ. ಮನುಷ್ಯನ ಪಾಪವು ಗರ್ವವಾಗಿದೆ. ಗರ್ವವು ಅದ್ವಿತೀಯ ರೋಗವಾಗಿದೆ; ರೋಗವಿದ್ದವನನ್ನು ಬಿಟ್ಟು ಪ್ರತಿಯೊಬ್ಬನನ್ನೂ ಅದು ರೋಗಿಯನ್ನಾಗಿ ಮಾಡುತ್ತದೆ ... ಆದರೆ ಅದು ಕ್ರಮೇಣವಾಗಿ ಅವನನ್ನು ಕೊಲ್ಲುತ್ತದೆ.

## ಕ್ರಿಸ್ತನು ದೀನತೆಯನ್ನು ನಿರೂಪಿಸಿದನು

ದೊಡ್ಡ ಜನರು ನಮ್ಮನ್ನು ಪ್ರೇರೇಪಿಸುವರು. ಅವರು ಅತಿ ದೊಡ್ಡ ಸದ್ಗುಣಗಳನ್ನು ಉದಾಹರಿಸಬಹುದು, ಆದರೆ ಯಾವ ವ್ಯಕ್ತಿಯು ನಿಜವಾಗಿಯೂ ದೀನತೆಯನ್ನು ಪ್ರದರ್ಶಿಸುವನು? *ಯೇಸುವು ಮಾತ್ರವೇ!* "ನಾನು ದೀನತೆಯಲ್ಲಿ ಪರಿಣಿತನು" ಎಂದು ಮೂರ್ಖನು ಮಾತ್ರವೇ ಹೇಳುವನು. ದೀನ ಮನುಷ್ಯನು ದೀನತೆಯನ್ನು ಹೇಳಿಕೊಳ್ಳಲಾರನು! ನಮಗೆ ಇರತಕ್ಕದ್ದು ದೇವರ ಕೃಪೆಯಿಲ್ಲದೇ ನಮಗೆ ಇರಲಾರದು. ದೇವರು ಮಾನವ ಕುಲವನ್ನು ಸೇರಿಕೊಂಡು, ಶಿಲುಬೆಯ ಮೇಲೆ ಮರಣ ಹೊಂದಿದಾಗ ಕ್ರಿಸ್ತನಲ್ಲಿ ದೇವರು ತನ್ನನ್ನು ತಗ್ಗಿಸಿಕೊಂಡನು (ಫಿಲಿಪ್ಪಿ 2:1-11). ಕೃಪೆಯಿಂದ ರಕ್ಷಣೆಯು ದೀನತೆಯನ್ನು ನಿರೂಪಿಸುತ್ತದೆ. ಯೇಸುವು ದೀನತೆಯನ್ನು ಮಾತ್ರ ಬೋಧಿಸಲಿಲ್ಲ; ಆತನು *ದೀನತೆಯಾಗಿದ್ದನು.* "ಆತ್ಮದಲ್ಲಿ ಬಡವರಾಗಿರುವವರು ಧನ್ಯರು" ಎಂಬುದು ಮತ್ತಾಯ 5:3-11ರಲ್ಲಿ ಧನ್ಯವಾಚಕಗಳ ಅಸ್ತಿವಾರವಾಗಿದೆ. "ಹಾಗಾದರೆ ಯಾರು ದೊಡ್ಡವರು?" ಎಂದು ಶಿಷ್ಯರು ಪ್ರಶ್ನಿಸಿದರು (ಮತ್ತಾಯ 18:1). ಯೇಸುವು ಒಂದು ಚಿಕ್ಕ ಮಗುವನ್ನು ಒಂದು ಉದಾಹರಣೆಯಾಗಿ ತೆಗೆದುಕೊಂಡನು ಮತ್ತು "ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕರಾಜ್ಯದಲ್ಲಿ ಹೆಚ್ಚಿನವನು" (ಮತ್ತಾಯ 18:4) ಎಂದು ಹೇಳಿದನು. ಔತಣಕ್ಕೆ ಆಮಂತ್ರಿಸಲ್ಪಟ್ಟ ಅತಿಥಿಗಳಿಗೆ ಹೀಗೆ ಯೇಸು ಹೇಳಿದನು, "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಲೂಕ 14:11). ಯೇಸುವು ತನಗೆ ಸಹಾಯದ ಅಗತ್ಯತೆಯಿದ್ದಾಗ, ಆತನು ಸೇವೆ ಮಾಡಿದನು!

ಗರ್ವವು ನಿನ್ನಷ್ಟಕ್ಕೆ ನೀನೇ ಬಹಳವಾಗಿ ಯೋಚಿಸುವಂಥದ್ದಾಗಿರುತ್ತದೆ; ದೀನತೆಯು ಸುಮ್ಮನೇ "ನಿನ್ನಷ್ಟಕ್ಕೆ ನೀನೇ ಯೋಚಿಸುವದಾಗಿರುವದಿಲ್ಲ." ನಿನ್ನ ಮನಸ್ಸನ್ನು ನಿನ್ನಿಂದ ತೆಗೆದು ಹಾಕು ಮತ್ತು ನಿನ್ನನ್ನು ನಿನ್ನ ಮನಸ್ಸಿನಿಂದ ತೆಗೆದು ಹಾಕು. ಮನೋ ವಿಜ್ಞಾನವು ಸ್ವಯಂ - ಹುಡುಕುವಿಕೆಯನ್ನು, ಸ್ವ - ಗೌರವವನ್ನು ಸ್ವಯಂ - ಅರುಹನ್ನು

ಬೆಳಿಸುತ್ತದೆ; ಯೇಸುವು ಸ್ವ - ಅಲ್ಲಗಳೆಯುವಿಕೆಯನ್ನು ಪ್ರಸಂಗಿಸಿದನು (ಮತ್ತಾಯ 16:24-27). ನಿನ್ನನ್ನು ಅಲ್ಲಗಳೆ; ನಿನ್ನ ಶಿಲುಬೆಯನ್ನು ಹೊತ್ತುಕೋ. ಯೇಸುವು ಒಂದೇ ಆಜ್ಞೆಯನ್ನು ಕೊಟ್ಟಿದ್ದಾನೆ: "ನನ್ನನ್ನು ಹಿಂಬಾಲಿಸು." ಒಬ್ಬನು ದೀನನಾಗಿರದಿದ್ದರೆ ಅವನು ಯೇಸುವನ್ನು ಅನುಸರಿಸಲಾರನು ಇಲ್ಲವೇ ಯೇಸುವಿನಂತೆ ಆಗಲಾರನು.

ದೀನತೆಯ ಬಗ್ಗೆ ನನ್ನ ನಿರೂಪಣೆ ಯಾವುದು? "ಒಬ್ಬನು ಒಳ್ಳೆಯತನಕ್ಕೆ, ದಯೆಗೆ ಮತ್ತು ದೇವರ ಕೃಪೆಗೆ ಸಂಪೂರ್ಣವಾಗಿ *ಅಯೋಗ್ಯನಾಗಿದ್ದಾನೆ* ಮತ್ತು ಸಂಪೂರ್ಣ ವಾಗಿ *ದೇವರಿಲ್ಲದೇ* ಏನನ್ನಾದರೂ ಮಾಡಲಿಕ್ಕೆ ಸಾಮರ್ಥ್ಯವಿಲ್ಲದವನಾಗಿದ್ದಾನೆ ಎಂಬ ಮನವರಿಕೆ (ಭಾವನೆಯಲ್ಲಿ) ಇರುವುದು." ಮೊದಲಿನ ಹೇಳಿಕೆಯಲ್ಲಿ ಒಳಗೊಂಡಿರುವ ಕೃಪೆಯನ್ನು ಗ್ರಹಿಸಿಕೊಳ್ಳಲು ನಾವು ಬಂದಿದ್ದೇವೆ; ಬಹುಶಃ ನಾವು ಎರಡನೆಯ ಭಾಗವನ್ನು ಒಪ್ಪಿಕೊಂಡಿರುವದಿಲ್ಲ ಇಲ್ಲವೇ ಅದರ ಬಗ್ಗೆ ಯೋಚಿಸಿರುವದಿಲ್ಲ. ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ; ನಾವು ಕೃಪೆಯಿಂದ ಸೇವೆ ಮಾಡುತ್ತೇವೆ (ಎಫೆಸ 2:8-10).

"ದೇವರಿಗೆ ಮಹಿಮೆಯಾಗಲಿ!" (ನೋಡಿರಿ ಫಿಲಿಪ್ಪಿ 4:20) ಎಂದು ದೀನತೆಯು ಕೂಗುತ್ತದೆ. ಶಿಲುಬೆಯ ಮುಂದೆ ಯಾರು ಗರ್ವದಿಂದ ನಿಲ್ಲಬಹುದು? ಸತ್ಯವು ದೀನನನ್ನಾಗಿ ಮಾಡುತ್ತದೆ. ಪ್ರೀತಿಯು ದೀನನನ್ನಾಗಿ ಮಾಡುತ್ತದೆ. ಪಾಪವು ದೀನನನ್ನಾಗಿ ಮಾಡುತ್ತದೆ. ಯೋಹಾನ 13:3-9ರಲ್ಲಿ ಯೇಸುವು ತನ್ನ ಪಾದಗಳನ್ನು ತೊಳೆ ಯುವದನ್ನು ತಿರಸ್ಕರಿಸುವದರಿಂದ ಪೇತ್ರನು ಸುಳ್ಳು ದೀನತೆಯನ್ನು ಉದಾಹರಿಸಿದನು. ಯೇಸುವು ತೀವ್ರವಾಗಿ ಪೇತ್ರನನ್ನು ಗದರಿಸಿದನು. ನಿಜವಾದ ದೀನತೆಯು ತನ್ನನ್ನು ಸಂಪೂರ್ಣವಾಗಿ ಯೇಸುವಿಗೆ ಕೊಡಲು ಪೇತ್ರನು ಉತ್ತೇಜನಗೊಳಿಸಲ್ಪಟ್ಟನು.

ಯೇಸುವು ಭೂಲೋಕಕ್ಕೆ ಬಂದಾಗ, ದೀನತೆಯು ಒಂದು ಬೂದಿಯ ರಾಶಿಯಂತೆ ಹೆಚ್ಚಾಗಿ ಅಪೇಕ್ಷಿಸುವಂಥದ್ದಾಗಿರಲಿಲ್ಲ. ರೋಮನ್ನರಿಗೆ ಅದು ಬಲಹೀನತೆಯಾಗಿತ್ತು; ಗ್ರೀಕನಿಗೆ ಅದು ತಿರಸ್ಕರಿಸಲ್ಪಡುವಂಥದ್ದಾಗಿತ್ತು. ದೀನನಾಗಿರುವಂಥದ್ದು ಬಲಹೀನ ನಾಗಿರುವದಕ್ಕೆ, ಹೇಡಿಯಾಗಿರುವದಕ್ಕೆ ಹೋಲಿಕೆಯಾಗಿತ್ತು. ಯೇಸುವು ಶಿಲುಬೆಯ ಮೇಲಿಟ್ಟ ಶಾಪವನ್ನು ತೆಗೆದುಕೊಂಡನು ಮತ್ತು ಶಿಲುಬೆಯನ್ನು ಕಿರೀಟವಾಗಿ ಮಾರ್ಪಡಿಸಿದನು. ತಿರಸ್ಕರಿಸಿದ ಮಾತನ್ನು ಯೇಸುವು ತೆಗೆದುಕೊಂಡು, ಅದನ್ನು ಮಹಿಮೆಯಲ್ಲಿ ಕಿರೀಟದ ರತ್ನವನ್ನಾಗಿ ಮಾಡಿದನು! *ಎಂಥಾ ರಕ್ಷಕನು!*

ದೀನತೆಯು ಇರುವದನ್ನೂ ಮಾಡುವದನ್ನೂ *ಎರಡನ್ನೂ* ಒಳಗೊಂಡಿರುತ್ತದೆ, ಅದು ಹೃದಯದ ಗುಣಲಕ್ಷಣವಾಗಿದೆ. ಹೀಗೆ ನಾವು ಇಲ್ಲಿರುತ್ತೇವೆ. ಆದಾಗ್ಯೂ, ಅದು ಒಂದು ತೀರ್ಮಾನ, ಒಂದು ಕೃತ್ಯ, ಒಂದು ಸಮರ್ಪಣೆ ಆಗಿರುತ್ತದೆ. ನಾವು ದೇವರ ಮುಂದೆ ನಮ್ಮನ್ನು ತಗ್ಗಿಸಿಕೊಳ್ಳುತ್ತೇವೆ; ಜನರ ಮುಂದೆ ನಾವು ನಮ್ಮನ್ನು ತಗ್ಗಿಸಿಕೊಳ್ಳುತ್ತೇವೆ (ರೋಮಾಪುರ 12:3; ಫಿಲಿಪ್ಪಿ 2:3). ದೇವರಿಗೆ ಮನುಷ್ಯನ ಕೇವಲ ಉತ್ತರವು ತನ್ನನ್ನು ತಗ್ಗಿಸಿಕೊಳ್ಳುವದಾಗಿದೆ. ದೀನತೆಯು ತನ್ನನ್ನು ಎರಡು ವಿಧಗಳಲ್ಲಿ ಪ್ರಕಟಿಸಿಕೊಳ್ಳುತ್ತದೆ: (1)ಪ್ರಾಮಾಣಿಕತೆ. ಇದು ಸ್ವಯಂ - ವಿಮರ್ಶೆಗಾಗಿ ಸಾಮರ್ಥ್ಯವುಳ್ಳದ್ದಾಗಿರುತ್ತದೆ. ಯೇಸುವು ನಮಗೆ ನ್ಯಾಯತೀರಿಸುವಲ್ಲಿ ಮೊದಲು ನಮಗೆ ನಾವೇ ನ್ಯಾಯ ತೀರಿಸಿಕೊಳ್ಳಬೇಕು ಹಾಗೂ ಹೆಚ್ಚು ಖಂಡಿತವಾಗಿ ಅದನ್ನು ಮಾಡಬೇಕೆಂದು ಆಜ್ಞಾಪಿಸಿದ್ದಾನೆ (ಮತ್ತಾಯ 7:1-5). ದೀನರಾದ ಜನರು ತಮ್ಮ ಕಡೆಗೆ ತಾವೇ ನಗಬಹುದು. (2) ಯಥಾರ್ಥತೆ. ಪ್ರೀತಿಯಲ್ಲಿ ಮತ್ತು ಯಥಾರ್ಥತೆಯಲ್ಲಿ ನಾವು ಇತರರಿಗೆ ಸತ್ಯವನ್ನು ಬೋಧಿಸುತ್ತೇವೆ. ದೀನತೆಯು ಇತರರು ಯಶಸ್ವಿಯಾಗುವಾಗ ನಾವು ಆನಂದಿಸಬೇಕೆಂದು ಕೇಳುತ್ತದೆ. ಇನ್ನೊಬ್ಬನ ಯಶಸ್ಸು ನನ್ನನ್ನು ಸೋಲುವಂತೆ

ಮಾಡಬಾರದು ಇನ್ನೊಬ್ಬನ ಕೀರ್ತಿಯು ನನ್ನ ಖರ್ಚಿನಲ್ಲಿ ಇರುವದಿಲ್ಲ. "ಸಂತೋಷ ಪಡುವವರ ಸಂಗಡ ಸಂತೋಷಪಡಿರಿ" (ರೋಮಾಪುರ 12:15ಎ). ಕ್ರೈಸ್ತ ಧರ್ಮದ ಉಪದೇಶಗಳನ್ನು ಕುರಿತು ಔಗುಸ್ತೀನನು ಈ ತೀರ್ಮಾನಕ್ಕೆ ಬುದ್ಧಿವಂತಿಕೆಯಿಂದ ತಲುಪಿದನು:

ಪ್ರಥಮ ನಿಯಮ ... ದೀನತೆ.
ಎರಡನೆಯ ನಿಯಮ ... ದೀನತೆ.
ಮೂರನೆಯ ನಿಯಮ ... ದೀನತೆ.[2]

ಜನರು ನನ್ನ ಬಗ್ಗೆ ಹೆಚ್ಚಾಗಿ ಮೆಚ್ಚಿಕೊಳ್ಳುತ್ತಾರೆ, ಆದರೆ ಅದರ ವಿಮರ್ಶೆಗಳು ಸಾಮಾನ್ಯವಾಗಿ ನಾನು ಮಾಡಿದ್ದರ ಬಗ್ಗೆ ಕೇಂದ್ರೀಕರಿಸುತ್ತವೆ. ಆದರೆ ನಾನು ಯಾರಾಗಿದ್ದೇನೆ ಎಂಬುದರ ಮೇಲಲ್ಲ. ನನ್ನ ಐವತ್ತು ವರ್ಷಗಳ ಸೇವೆಯಲ್ಲಿ, ನಾನು ಅತಿಯಾಗಿ ಯೇಸುವಿನಂತೆ ಇದ್ದೇನೆಂದು ಯಾರೂ ನನ್ನ ಮೇಲೆ ದೂರು ಹೇಳಿರುವದಿಲ್ಲ.

## ಪರಿಶುದ್ಧರು ತಾವು ಪರಿಶುದ್ಧರಾಗಿರುವರೆಂದು ತಿಳಿದಿರುವದಿಲ್ಲ

ಪ್ರಮುಖ ಸದ್ಗುಣಗಳು ವಿರೋಧಾಭಾಸವುಳ್ಳವುಗಳಾಗಿರುತ್ತವೆ. ಅವುಗಳು ನಿಮಗಿರತಕ್ಕದ್ದು, ಆದಾಗ್ಯೂ ಅವು ನೇರವಾಗಿ ಹಿಂಬಾಲಿಸಲ್ಪಡಬಾರದು. ನೀವು ನೇರವಾಗಿ ಸುಖವನ್ನು ಹಿಂಬಾಲಿಸುವದಿಲ್ಲ, ಆದರೆ ಮಾರ್ಗದಲ್ಲಿ ಕಂಡುಕೊಳ್ಳುತ್ತೀರಿ. ಇದಕ್ಕೆ ಇಂಗ್ಲೀಷ್ ಪದವು "serendipity." ಇದಲ್ಲದೇ, ಮೂಲಭೂತ ಸದ್ಗುಣಗಳನ್ನು ಹೊಂದಿಕೊಂಡಿರುವವರು ಅವುಗಳ ಬಗ್ಗೆ ಅರುಹುವುಳ್ಳವರಾಗಿರುವದಿಲ್ಲ. ನಿಮಗೆ ಮೂಲ ಸದ್ಗುಣಗಳು ಇರುವೆವೆಂದು ನೀವು ಯೋಚಿಸುವಾಗ, ನೀವು ಅವುಗಳನ್ನು ಕಳೆದು ಕೊಂಡಿರುವಿರಿ. ದೀನತೆಯುಳ್ಳ ವ್ಯಕ್ತಿಯು ತನ್ನ ದೀನತೆಯ ಬಗ್ಗೆ ಅರುಹುವುಳ್ಳವರಾ ಗಿರುವದಿಲ್ಲ! ನಿನ್ನ ದೀನತೆಯ ಬಗ್ಗೆ ಹೆಮ್ಮೆಯಿಂದ ಇರುವುದು ಮೂರ್ಖತನದ್ದಾಗಿದೆ. ಅತೀ ಹೆಚ್ಚಾಗಿ ದೀನತೆಯಿಂದಿರುವದಕ್ಕಾಗಿ ಗುರುತಿನ ಚೀಟಿ ಕೊಡಲ್ಪಟ್ಟ ಮನುಷ್ಯನು ಆ ಗುರುತಿನ ಚೀಟಿಯನ್ನು ಧರಿಸುವದರಿಂದ ಆ ಗೌರವವು ಹಾಳು ಮಾಡಲ್ಪಡುತ್ತದೆ. ಬುದ್ಧಿವಂತ ಮನುಷ್ಯರು ಮಾತ್ರವೇ "ತಮಗೆ ಯಾವ ವಿವೇಕವು ಇರುವದಿಲ್ಲ" ಎಂಬುದನ್ನು ತಿಳಿದುಕೊಂಡಿರುತ್ತಾರೆ. ಉದಾರಿಗಳಾದ ಜನರು ಮಾತ್ರವೇ ಅವರು ಎಷ್ಟು ಕಡಿಮೆ ಕೊಡುವರೆಂದು ತಿಳಿದುಕೊಳ್ಳುವರು. ನಿಮಗೆ ಯಾವುದೇ ಅರ್ಥವಿರುವದಿಲ್ಲವೆಂದು ಅರಿತುಕೊಳ್ಳಲಿಕ್ಕೆ ಮಹಾಜ್ಞಾನವು ತೆಗೆದುಕೊಳ್ಳಲ್ಪಡುತ್ತದೆ!

ಅತೀ ದೊಡ್ಡ ಉದಾಹರಣೆಯು ಯೇಸುವಾಗಿರುತ್ತಾನೆ. ಒಬ್ಬ ಉತ್ತಮವಾದ ಯುವಕನು ಯೇಸುವಿನ ಬಳಿಗೆ ಓಡಿಬಂದು ಆತನ ಮುಂದೆ ಮೊಣಕಾಲೂರಿ, ಆತನನ್ನು ಒಳ್ಳೆಯವನೆಂದು ಕರೆದನು. ಆಗ ತನ್ನ ಸ್ವಂತ ಕೊರತೆಗಳ ಬಗ್ಗೆ ಪ್ರಶ್ನಿಸಿದನು (ಮತ್ತಾಯ 19:16-22; ನೋಡಿರಿ ಮಾರ್ಕ 10:17-22). ಎಷ್ಟು ಆಶ್ಚರ್ಯಕರವಾದದ್ದು! ಆಗ ಯೇಸುವು ಅವನಿಗೆ ಆಘಾತಗೊಳಿಸಿದನು: "ಯಾವುದು ಒಳ್ಳೆಯದೆಂದು ಯಾಕೆ ನನ್ನನ್ನು ಕೇಳುತ್ತೀ? ಒಬ್ಬನು ಮಾತ್ರವೇ ಒಳ್ಳೆಯವನಾಗಿರುವನು ..." (ಮತ್ತಾಯ 19:17). ಪರಿಪೂರ್ಣನಾದ ಒಬ್ಬಾತನು ಮಾತ್ರವೇ ಆದ ಯೇಸುವು "ಒಳ್ಳೆಯವನೆಂದು"! ಕರೆದು ಕೊಳ್ಳಲು ನಿರಾಕರಿಸಿದನು, ನಾವು ಹೇಗಿರಬಹುದು?

ನಾವು ದೀನರೂ ಒಳ್ಳೆಯವರೂ ಆಗುವ ಅಗತ್ಯತೆಯಿದೆ; ಅದರ ಬಗ್ಗೆ ನಾವು ಅರುಹುವುಳ್ಳವರಾಗಿರಲಾರೆವು. ಇದು ಒಂದು ಶೋಧನೆ, ಒಂದು ಗಂಡಾಂತರ,

"ಮೌನ ಸಮಯದಲ್ಲಿ" ಅಡಗಿರುತ್ತದೆ. ನಮ್ಮ ಮೌನ ಸಮಯದ ಬಗ್ಗೆ ನಾವು ಗರ್ವಿಗಳಾಗುವುದು, ದುಃಖಕರವಾದದ್ದಾಗಿದೆ! "ನಾವು ಇತರರಿಗಿಂತ ಹೆಚ್ಚು ಉತ್ತಮರಾಗಿದ್ದೇವೆ, ಯಾಕಂದರೆ ನಾವು ಅದರ ಬಗ್ಗೆ ಒಳ್ಳೆಯವರಾಗಿದ್ದೇವೆ" ಎಂದು ನಿರ್ಧರಿಸಬಹುದು! "ನಾನಿರುವಂತೆ ನೀನು ದೊಡ್ಡವನಾಗಿರುವಾಗ ದೀನನಾಗಿರುವುದು ಕಠಿಣವಾದದ್ದಾಗಿದೆ" ಎಂದು ಒಬ್ಬ ಮನುಷ್ಯನು ವ್ಯಾಖ್ಯಾನಿಸಿದನು. ಅಪೊಸ್ತಲರು ದೊಡ್ಡಸ್ತಿಕೆಯನ್ನು ಹುಡುಕಿದರು; ಆದರೆ ಅದು "ಸ್ವಯಂ - ದೊಡ್ಡಸ್ತಿಕೆಯಾಗಿದೆ." ಯೇಸುವು ಅದನ್ನು ಖಂಡಿಸಿದನು, ಆದರೆ ಆತನು ಅವರಿಗೆ ನಿಜವಾದ ದೊಡ್ಡಸ್ತಿಕೆಯನ್ನು - ದೀನತೆಯನ್ನು ಒದಗಿಸಿದನು.

## ಮಾನಸಾಂತರವು ದೀನತೆಗೆ ಕಾರಣವಾಗುತ್ತದೆ

ಪಶ್ಚಾತ್ತಾಪವುಳ್ಳ ಜನರು ದೀನರಾಗುತ್ತಾರೆ. ಅವರು ಬೇರೆ ಹೇಗಿರಬಹುದು? ಅವರು ಲೆಕ್ಕಾ ಕೊಡಬೇಕಾದವರು, ಅಪರಾಧಿಗಳು, ತಪ್ಪಿಹೋದವರು, ಸಹಾಯ ಹೀನರು ಆಗಿರುವರು. ದೀನತೆಯು ಮಾನಸಾಂತರಕ್ಕೆ ಕಾರಣವಾಗುವದಿಲ್ಲ; ಮಾನಸಾಂತರವು ದೀನತೆಗೆ ಕಾರಣವಾಗುವುದು. ನೀವು ಮಾನಸಾಂತರವನ್ನು ನಿಯಂತ್ರಿಸಲಾರಿರಿ; ಮಾನಸಾಂತರವು ನಿಮ್ಮನ್ನು ನಿಯಂತ್ರಿಸುವುದು. ಬಾಪ್ತಿಸ್ಮ ಹೊಂದಿ ಕೊಳ್ಳಲಿಕ್ಕೆ, ಕೊಡುವದಕ್ಕೆ, ಆಸ್ಪತ್ರೆಯನ್ನು ಸಂದರ್ಶಿಸಲಿಕ್ಕೆ ನೀವು ಸಮಯವನ್ನು ಏರ್ಪಡಿಸಬಹುದು; ಆದರೆ ಮಾನಸಾಂತರಪಡಲಿಕ್ಕೆ ಮುಂದಿನ ಸಮಯವನ್ನು ನೇಮಿಸ ಲಾರಿರಿ. ಪ್ರಸಂಗಿ ನಾತಾನನು ದಾವೀದನ ಬಾಗಿಲನ್ನು ತಟ್ಟಿದಾಗ ಆ ದಿನದಂದು ದಾವೀದನು ಮಾನಸಾಂತರ ಪಡುವದನ್ನು ಯೋಜಿಸಿರಲಿಲ್ಲ. ಅಪೊಸ್ತಲರ ಕೃತ್ಯಗಳು 2ರಲ್ಲಿ ಮೂರುಸಾವಿರ ಜನರು ಆ ದಿನದಂದು (ಪಂಚಾಶತ್ತಮ ದಿನದಂದು) ಮಾನಸಾಂತರ ಪಡಲು ಕೂಡಿಬಂದಿರಲಿಲ್ಲ. ದೇವರು ಮತ್ತು ಸತ್ಯವು ನಮ್ಮ ಚಿತ್ತಗಳನ್ನು ಜಯಿಸು ವಾಗ ಮಾನಸಾಂತರವು ಬರುತ್ತದೆ. ದಿನದಿನದ ಮಾನಸಾಂತರವು ನಮ್ಮ ಅನುದಿನದ ನಡೆಯುವಿಕೆಯ ನಿಜವಾದ ಸೂಚಿಕೆಯಾಗಿದೆ.

ಬೈಬಲಿನಲ್ಲಿ ಅತೀ ಹೆಚ್ಚು ದೀನತೆಯುಳ್ಳ ಮನುಷ್ಯನು ಯಾರಾಗಿರಬಹುದು? "ಫರೋಹ" ಎಂಬುದು ನನ್ನ ಉತ್ತರವಾಗಿದೆ. ದೇವರು ಫರೋಹನಿಗೆ ಒಬ್ಬ ಸಂದೇಶ ವಾಹಕನನ್ನು (ಮೋಶೆಯನ್ನು), ಹತ್ತು ಬಾಧೆಗಳನ್ನು ಮತ್ತು ಕೆಂಪು ಸಮುದ್ರದಲ್ಲಿ ನಾಶಪಡಿಸುವಿಕೆಯನ್ನು ಕಳುಹಿಸಿದನು; ಆದಾಗ್ಯೂ ಅವನು ಎಂದೂ ತನ್ನನ್ನು ತಗ್ಗಿಸಿಕೊಳ್ಳಲಿಲ್ಲ. ಪೇತ್ರನಿಗೂ ಯೂದನಿಗೂ ಮಧ್ಯದಲ್ಲಿ ಯಾವ ವ್ಯತ್ಯಾಸವಿತ್ತು? ಅವರಿಬ್ಬರೂ ಕ್ರಿಸ್ತನಿಗೆ ವಿರುದ್ಧವಾಗಿ ಪಾಪ ಮಾಡಿದರು ಪೇತ್ರನು ತನ್ನನ್ನು ತಗ್ಗಿಸಿಕೊಂಡದ್ದು ಹಾಗೂ ಯೂದನು ತನ್ನನ್ನು ತಗ್ಗಿಸಿಕೊಳ್ಳದೇ ಇರುವಂಥದ್ದು ಭಿನ್ನತೆಯಾಗಿದೆ. "ದೇವರೇ, ನನ್ನನ್ನು ದೀನನನ್ನಾಗಿ ಮಾಡು" ಎಂದು ಪರಿಶುದ್ಧ ಬರಹಕ್ಕೆ ಹೊಂದದ ಪ್ರಾರ್ಥನೆ ಮಾಡುತ್ತೇವೆ. ಹಾಗೆ ಮಾಡುತ್ತಲೇ ಇರುತ್ತೇವೆ! ನಿಮ್ಮ ಅರ್ಥವೇನು ಎಂಬುದನ್ನು ನಾನು ತಿಳಿದಿದ್ದೇನೆ (2 ಕೊರಿಂಥ 12:21ರಲ್ಲಿ ಪೌಲನು ಅದನ್ನು ಹೇಳಿದನು). ಹೀಗಿದ್ದರೂ, ಹೊಡ್ಜ್‌ನು ಮಾತ್ರವೇ ಹೊಡ್ಜ್‌ನನ್ನು ದೀನನನ್ನಾಗಿ ಮಾಡಬಹುದು. ಇದು ನಮ್ಮ ಸ್ವಂತ ಆಯ್ಕೆಯಾಗಿದೆ. ದೇವರು ನಮ್ಮನ್ನು ಶಿಕ್ಷಿಸಬಹುದು; ಆತನು ವಿವಿಧ ಪರಿಸ್ಥಿತಿಗಳ ಮುಖಾಂತರ ಕಾರ್ಯಮಾಡಬಹುದು. ಹೊಡ್ಜನು ಮಾನಸಾಂತರ ಪಡಬಹುದು ಮತ್ತು ತನ್ನನ್ನು ತಗ್ಗಿಸಿಕೊಳ್ಳಬಹುದು. "ಪ್ರತಿಯೊಬ್ಬ ಕ್ರೈಸ್ತನಿಗೆ ... ದೀನನಾಗಿರುವದರ ಮತ್ತು ದೀನನಾಗಿ ಮಾಡಲ್ಪಡುವದರ ಮಧ್ಯದಲ್ಲಿ ಆಯ್ಕೆಯಿರುವುದೆಂದು ನಾನು ನಂಬುತ್ತೇನೆ" ಎಂದು ಚಾರ್ಲಸ್ ಸ್ಪರ್ಜನ್ ಹೇಳಿ

ದನು.[3] "ಓ ನನ್ನ ದೇವರೇ, ಜನರು ನಿನ್ನನ್ನು ಮಾತ್ರವೇ ತಿಳಿದಿದ್ದರೆ, ಅವರು ಎಂದೂ ಪಾಪ ಮಾಡುವದಿಲ್ಲ" ಎಂದು ಇಗ್ನೇಷಿಯಸ್‌ನು ಹೇಳಿದನು. ಬಲವುಳ್ಳವರು ಮಾತ್ರವೇ ದೀನರಾಗಿರಬಹುದು ಎಂಬುದು ವಿಪರ್ಯಾಸವಾದದ್ದಾಗಿದೆ.

## ಕೃತಜ್ಞತೆಯು ದೀನತೆಯ ತಾಯಿಯಾಗಿದೆ

ಗರ್ವದ ವಿರುದ್ಧವು ದೀನತೆಯಾಗಿರುವದಿಲ್ಲ; ಅದು ಕೃತಜ್ಞತೆಯಾಗಿರುತ್ತದೆ. "ಸಹೋದರ ಹೊಡ್ಜ್‌ನೇ, ನಾನು ಅನುಕಂಪದ ಮೇಲೆ ಇರುವದಿಲ್ಲ" ಎಂದು ನೀನು ಹೇಳ ಬಹುದು. ಹೌದು, ನೀನು ಇರುತ್ತೀ ... ನಾವೆಲ್ಲರೂ ಇರುತ್ತೇವೆ. ನಿನ್ನ ಕುಟುಂಬವನ್ನು ಮತ್ತು ಸ್ನೇಹಿತರನ್ನು ಕೇಳು! ಆತ್ಮಿಕತೆಯ ತಿರುಳು ಅವಲಂಭನೆಯಾಗಿರುವುದು. ನಾವೆಲ್ಲರೂ ಸಹಾಯ ಹೀನರಾಗಿದ್ದೇವೆ. "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ" (2 ಕೊರಿಂಥ 9:15) ಎಂದು ಪೌಲನು ಕೂಗಿದನು. ಕೃಪೆ, ಶಿಲುಬೆ, ಸುವಾರ್ತೆ ... *ಕೃತಜ್ಞತೆ!* ನಾವು ಯಾವಾಗಲೂ ನಮ್ಮ ತಾಯಿಗಳ ಮುಂದೆ ದೀನತೆಯುಳ್ಳವರಾಗಿರುತ್ತೇವೆ - ಅವರಿಗೆ ನಾವು ಬಹಳ ಕೊಡಬೇಕಾಗಿರುತ್ತದೆ. ಕೃತಜ್ಞತೆಯುಳ್ಳ ಜನರು ದೀನತೆಯುಳ್ಳ ವರಾಗಿರುತ್ತಾರೆ.

ಇಲ್ಲಿ ಇನ್ನೊಂದು ವಿರೋಧಾಭಾಸವಿರುತ್ತದೆ. ದೀನತೆಯು ನಮ್ಮ ಹೃದಯಗ ಳಲ್ಲಿ ಬೆಚ್ಚಗಿನ ಮಾತಾಗಿರುತ್ತದೆ. ನಾವು ಅದರ ಬಗ್ಗೆ ಮಾತಾಡುತ್ತೇವೆ, ಅದನ್ನು ಬಯಸುತ್ತೇವೆ. ಅದನ್ನು ಮೆಚ್ಚಿಕೊಳ್ಳುತ್ತೇವೆ, ಮತ್ತು ಅದನ್ನು ಹೊಗಳುತ್ತೇವೆ; ಆದಾಗ್ಯೂ ದೀನತೆಯ ಬಗ್ಗೆ ಬರೆದ ಅತೀ ಪ್ರಸಿದ್ಧ ಪುಸ್ತಕಗಳಿರುವದಿಲ್ಲ. ಆ ವಿಷಯದ ಮೇಲೆ ಧ್ವನಿಸುರುಳಿಗಳು, ಸಮ್ಮೇಳನಗಳು ಇಲ್ಲವೇ ಲಿಟ್ರೀಟುಗಳು ಬಹಳ ಕಡಿಮೆ ಇರುತ್ತವೆ. ಇದು ಬದಲಾಗುವದೆಂದು ನಾನು ನಿರೀಕ್ಷಿಸುತ್ತೇನೆ.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

ಟಿಪ್ಪಣೆಗಳು

[1]Quoted in Michael P. Green, ed., *Illustrations for Biblical Preaching* (Grand Rapids, Mich.: Baker Book House, 1989), 35. [2]Adapted from a quotation in John Calvin *Institutes* 2.2.11. [3]Quoted in Tom Carter, comp., *2200 Quotations from the Writings of Charles H. Spurgeon* (Grand Rapids, Mich.: Baker Books, 1988), 104.

© 2009 Truth for Today